## ಇಲ್ಲೇ ಎಲ್ಲೋ ಕೂತಿದ್ದಾಳೆ

ತುಂಬಿದ ಸಭೆಯಲ್ಲಿ ವೇದಿಕೆ ಮೇಲೆ ಕೈಯಲ್ಲಿ ಮೈಕ್ ಹಿಡಿದು ನಿಂತು ಭಾಷಣ ಬಿಗಿಯುತ್ತಿದ್ದ ಒಬ್ಬ ಮಹನೀಯ, 'ನಮ್ಮ ಆಯುಸ್ಸೆಲ್ಲ ಬರೀ ಹೆದರುವುದರಲ್ಲೇ ಕಳೆದು ಹೋಗ್ತಾ ಇದೆ. ಹೇಗೆಂದರೆ ಮೊದಲು ಅಮ್ಮನಿಗೆ, ಎರಡನೆಯದು ಟೀಚರ್‌ಗೆ, ಅದಾದನಂತರ ನಮ್ಮ ಬಾಸ್‌ಗೆ' ಎಂದು ಹೇಳಿದ.

ನಡುವೆ ಸಭಿಕರ ಸಾಲಿನಲ್ಲಿ ಕುಳಿತವನೊಬ್ಬ ಎದ್ದು ನಿಂತು 'ಸಾರ್. ನೀವು ನಿಮ್ಮ ಪತ್ನಿ ಬಗ್ಗೆ ಹೇಳಲೇ ಇಲ್ಲ' ಎಂದ.

ಆತ 'ಆಕೆ ಇಲ್ಲೇ ಎಲ್ಲೋ ಕುಳಿತಿರುವುದರಿಂದ ಹೆದರಿ ಆ ಅಂಶ ಹೇಳಿಲ್ಲ' ಎಂದು ವಿವರಿಸಿದಾಗ ಸಭಿಕರ ಸಮೂಹದಿಂದ ಶಿಳ್ಳೆ, ಚಪ್ಪಾಳೆ ಬಂತು.

**ಅರವಿಂದ ಜಿ. ಜೋಷಿ**



---

## ಪರಿಶೀಲನೆಯ ಪರಿ!

ಪತ್ನಿ, ಪತಿಗೆ ವಾಟ್ಸ್‌ಆ್ಯಪ್ ಮೆಸೇಜ್ ಮಾಡಿದಳು.

'ಸಂಜೆ ಆಫೀಸಿಂದ ಮನೆಗೆ ಬರುವಾಗ ತರಕಾರಿ ಖರೀದಿಸಿ ತನ್ನಿ. ಹಾಗೇ ಪುಟ್ಟನಿಗೆ ಪೆನ್ಸಿಲ್ ಮತ್ತು ಡ್ರಾಯಿಂಗ್ ಪುಸ್ತಕ ಬೇಕಂತೆ, ಅದನ್ನೂ ತನ್ನಿ. ರಾತ್ರಿ ಊಟಕ್ಕೆ ಚಪಾತಿ ಮಾಡಬೇಕೆಂದಿದ್ದೇನೆ; ಜೊತೆಗೆ ಆಮ್ಲೆಟ್ ಬೇಕಿದ್ದರೆ ಮೊಟ್ಟೆ ಕೂಡಾ ತನ್ನಿ. ಅಂದ ಹಾಗೆ ನೆರೆಮನೆಯಾಕೆ ನಿಮಗೆ 'ಹಲೋ' ಹೇಳಿ ಕಳಿಸಿದ್ದಾಳೆ.

ಪತಿ ತಕ್ಷಣ ಉತ್ತರಿಸಿದ, 'ಯಾರು ನೆರೆಮನೆಯಾಕೆ?'

ಪತ್ನಿ ಪ್ರತ್ಯುತ್ತರ ರೂಪದಲ್ಲಿ ಸಂದೇಶಿಸಿದಳು: 'ರೀ, ಸುಮ್ನಿರಿ. ಯಾರೂ ಇಲ್ಲ. ನಾನು ಉದ್ದೇಶಪೂರ್ವಕವಾಗಿಯೇ ಮೆಸೇಜ್ ಕೊನೆಯಲ್ಲಿ ಹಾಗೆ ಬರೆದೆ, ನೀವು ಪೂರ್ತಿ ಸಂದೇಶ ಓದಿರುವುದನ್ನು ಖಚಿತಪಡಿಸಿಕೊಳ್ಳಲು ಹಾಗೆ ಮಾಡಿದೆ. ಪತಿಯೀಗ ಇಂಗು ತಿಂದ ಮಂಗನಂತಾದ!



ಕಲೆ: ಗಣೇಶ ಆಚಾರ್ಯ

**ರಮಣ್ ಶೆಟ್ಟಿ ರೆಂಜಾಳ**